ಒಂದು ಕತ್ತಲೆಯಿರುವಂತೆ. ಆ ಖೋಲಿಯ ಒಳಗೊಂದು ಖೋಲಿಯಿದೆ. ಅಲ್ಲೊಂದು ಕೀಟ ನನ್ನ ಹಾದಿ ಕಾಯುತ್ತ ಕೂತಿರುತ್ತಿತ್ತು. ಬಚ್ಚಾ, ನಾನದಕ್ಕೆ ಬಚ್ಚಾ ಎಂದೇ ಹೆಸರಿಟ್ಟಿದ್ದೆ. ಬಚ್ಚೇಕೆ ಮಾಫಿಕ್ ಹೀ ಥಾ ವೋ. ಇತ್‌ನಾಸಾ, ರೆಕ್ಕೆಗಳು ಕೋಮಲವಾಗಿದ್ದವು. ಕೂದಲಿನಂತೆ ನವಿರು ಕಾಲುಗಳು. ಇದು ಇಲ್ಲಿಗೆ ಹೇಗೆ ಬಂತು, ಅದರದೊಂದು ಕಥೆಯಿದೆ. ನನಗೊಬ್ಬ ಚಿಗಪ್ಪನಿದ್ದ. ಅವನೆಂದೂ ವ್ಯಾಪಾರಕ್ಕೆ ಕೂರಲಿಲ್ಲ. ಹೊರಗೆ ಇರುತ್ತಿದ್ದ. ಪ್ರಪಂಚ ಸುತ್ತುತ್ತಿದ್ದ. ಎಂದಾದರೊಮ್ಮೆ ಆಕಸ್ಮಿಕವಾಗಿ ಮನೆಗೆ ಬಂದು ಹೋಗುತ್ತಿದ್ದ. ಚಿಗಪ್ಪ ಸ್ವಲ್ಪ ತಲೆ ತಿರುಕನಾಗಿದ್ದ ಎಂದೂ ಹೇಳಲಾಗುತ್ತಿತ್ತು. ಬುದ್ಧಿ ಕಡಿಮೆಯಿತ್ತು. ಎಲ್ಲೆಲ್ಲೂ ದೂರ ದೂರ ಕಾಡುಮೇಡಿನಲ್ಲಿ ಗುಡ್ಡ–ಬೆಟ್ಟಗಳಲ್ಲಿ ಅಲೆದಾಡುತ್ತಿರುತ್ತಿದ್ದ. ಹಕ್ಕಿಗಳ ಸ್ವರ ಕೇಳಿ ಅದರ ಬೆನ್ನು ಹತ್ತುತ್ತಿದ್ದ, ಅವುಗಳೊಂದಿಗೆ ಮಾತಾಡುತ್ತಿದ್ದ, ಚಿಕ್ಕ ಚಿಕ್ಕ ಕೀಟಗಳನ್ನು ಅಂಗೈಯಲ್ಲಿಟ್ಟುಕೊಂಡು ನೋಡುತ್ತ ಇರುತ್ತಿದ್ದ. ಅದು ಬಾಬೂನ ಮೈಮೇಲೆಲ್ಲ ಓಡಾಡುತ್ತಿತ್ತು. ಅವನು ಬರೇ ಉರುಳಿಕೊಂಡಿರುತ್ತಿದ್ದ. ಏನೂ ತಿನ್ನುತ್ತಿರಲಿಲ್ಲ, ಕುಡಿಯುತ್ತಿರಲಿಲ್ಲ. ಹುಚ್ಚು ತಲೆಗೇರಿ ಆತ್ಮಹತ್ಯೆ ಮಾಡಿಕೊಂಡನೆಂದು ಯಾರೋ ಹೇಳಿದರು. ಕೆಲವರು ಅವನು ಹೋದವನು ತಿರುಗಿ ಬರಲೇ ಇಲ್ಲ ಎಂದರು. ಹೋಗುವ ಮೊದಲು ಅವನು ಆ ಕಗ್ಗತ್ತಲ ಖೋಲಿಯಲ್ಲಿ ಬಹಳ ದಿನ ಕೂತೇ ಇದ್ದನಂತೆ. ಅವನೇ ಬೆಟ್ಟದಿಂದ ಈ ಕೀಟವನ್ನು ತಂದು ಬಿಟ್ಟಿದ್ದ. ಚಾಚಾ ಹೋದ. ಆದರೆ, ಕೀಟ ಮಾತ್ರ ಉಳಿಯಿತು. ಪ್ಯಾರಾ ಬಚ್ಚಾ. ಈ ಕಗ್ಗತ್ತಲೆಯಲ್ಲಿ ನಾನು ಅಳುತ್ತ ಕುಳಿತಿರುತ್ತಿದ್ದೆ. ಅಷ್ಟರಲ್ಲಿ ಅದು ಎಲ್ಲಿಂದಲೋ ಬರುತ್ತಿತ್ತು. ಅದು ಬಂತೆಂದರೆ ಸಾಕು ಗುಂ ಗುಂ ಎಂಬ ಸ್ವರ ಕೇಳಿ ಬರುತ್ತಿತ್ತು. ಗೋಡೆಯ ಮೇಲಿಂದ ಮೆಲ್ಲನೆ ನಡೆಯುತ್ತಿತ್ತು. ಅದಕ್ಕೆ ಆರು ಕಾಲುಗಳಿದ್ದವು. ಆದರೆ, ಯಾವ ಅವಸರವಿರಲಿಲ್ಲ. ತನ್ನನ್ನು ಯಾರಾದರೂ ಹಿಡಿಯಬಹುದೆಂಬ ಚಿಂತೆಯಿರಲಿಲ್ಲ. ತನ್ನ ಗುಂಗಿನಲ್ಲಿ ಗುಂ ಗುಂ ಎಂದು ಗುಣುಗುಣಿಸುತ್ತ ಕದಂತಾಲ್ ಮಾಡುತ್ತ ಮೆಲ್ಲಗೆ ಮುಂದೆ ಸರಿಯುತ್ತಿತ್ತು. ಅದರ ಕಿರಿದಾದ ತಲೆಯ ಕೆಳಗಿರುವ ಕಣ್ಣುಗಳು ಮಾತ್ರ ಹೊಳೆಯುತ್ತಿದ್ದವು. ಅದರ ಕಡ್ಡಿಯಂಥ ಕಾಲಿನ ಕೆಳಗೆ ತುಣುಕಿನಷ್ಟು ಬೆಳಕಿತ್ತು. ಅದು ಕಾಲು ಎತ್ತಿದಾಗ ಒಂದು ಬಿಂದು ಹೊತ್ತಿಕೊಳ್ಳುತ್ತಿತ್ತು. ಇಂಥ ಭೀಕರ ಕಗ್ಗತ್ತಲೆಯಲ್ಲಿ ಅದು ತನ್ನದೇ ಹೆಜ್ಜೆಯ ಟಾರ್ಚು ಉರಿಸುತ್ತ ದಾರಿಯನ್ನು ಹುಡುಕುತ್ತ ಹೊರಟಿದೆ ಎಂದೆನಿಸುತ್ತಿತ್ತು. ಅದು ಎಲ್ಲಿಗೆ ಹೊರಟಿತ್ತೋ ಯಾರಿಗೆ ಗೊತ್ತು. ಆದರೆ, ಬೆಳಕಿನ ದಿಕ್ಕಿನತ್ತ ಹೊರಟಿದೆ ಎಂದೆನಿಸುತ್ತಿತ್ತು. ನಾನಾಗ ನನ್ನ ಅಳುವನ್ನು ಮರೆತು, ಅದರೊಂದಿಗೆ ಮಾತಾಡುತ್ತಿರುತ್ತಿದ್ದೆ. ಅದೂ ಸಹ ಗುಂ ಗುಂ ಎಂದು ನನ್ನೊಂದಿಗೆ ಹರಟೆ ಹೊಡೆಯುತ್ತಿತ್ತು. ನೋಡಿದಿರಾ, ಸ್ವಲ್ಪ ಮನದ ಮಾತು ಹೊರಹಾಕುವಷ್ಟರಲ್ಲೇ ಫೋನು ಹೊಡೆದುಕೊಳ್ಳಲಾರಂಭಿಸಿತು: ‘ಹಾಂ, ಬೋಲ್ ಬೇಟಾ. ಬೇಟಾ, ಶಾಂತವಾಗಿರು ಎಂದು ಹೇಳಿದೆನಲ್ಲ. ನೀನೇಕೆ ಅವನ ಬಗೆಗೆ ಯೋಚಿಸುತ್ತಿಯೆ? ಹಮೆ ಸಮಝೋಂಗೆ, ನಹೀ ಪೈದಾ ಹುವಾ ಐಸಾ ಕೋಯಿ ಶಖ್ಸ ಹಮಾರೆ ಘರ್ಮೇ. ನಿನಗೆ ಯಾವ ತಮ್ಮನೂ ಇರಲಿಲ್ಲ. ನನಗೆ ಮಗನೂ ಇರಲಿಲ್ಲ. ಏನು? ಅವನು ಹೀಗೆ ಮಾಡುವುದೇ ಸಾಧ್ಯವಿಲ್ಲ. ಅವನಲ್ಲಿ ಅಂಥ ಬಲವಿಲ್ಲ. ಅವನ ಹಿಂದೆ ಯಾರಿದ್ದಾರೆ? ಪಾಂಚ ಪಚಾಸ್ ಲೌಂಡೇ? ಅವರೇನು ಮಾಡುತ್ತಾರೆ ನಮಗೆ? ನಾನು ಹೇಳಿದೆನಲ್ಲ ಅವನು ಅಜ್ಞಾನಿಯೆಂದು. ಮಗನೆ, ನಿನ್ನ ಕಾಲಿಗೆ ಬೀಳುತ್ತೇನೆ ಇಂಥ ಅಪಚಾರ ಮಾಡಬೇಡ. ಅವನು ಸಿಕ್ಕರೆ ನನಗೆ ತಂದೊಪ್ಪಿಸು. ಇಡೀ ಆಯುಷ್ಯ ಅಂಗಡಿಯ ಖೋಲಿಯಲ್ಲಿ ಅವನನ್ನು ಕೂಡಿ ಹಾಕಿ ಬಿಡುತ್ತೇನೆ. ಮೇರಿ ಕಸಮ್ ಹೈ ತುಝೇ. ನಿನ್ನ ತಮ್ಮನಿಗೂ ಹೇಳು. ಅಥವಾ ಅಲ್ಲೇ ನಿಂತಿರು ನಾನೇ ಬರುತ್ತೇನೆ. ಹೌದು ನನ್ನನ್ನೇ ಕೊಂದು ಹಾಕಿಬಿಡಿ ಬೇಟಾ, ಕಹತಾ ಹೂಂ, ಹತಾರ ಒಗೆದು ಬಿಡು. ತುಝೆ ಮೇರಿ ಕಸಮ್ ಹೈ. ಅರಚುವುದಿಲ್ಲ ವಿನಂತಿ ಮಾಡುತ್ತೇನೆ.’

ಹೇ ಭಗವಂತ, ನನ್ನ ಇಬ್ಬರೂ ಮಕ್ಕಳಿಗೆ ಬುದ್ಧಿಕೊಡು. ಅವರೇನು ಮಾಡುತ್ತಿದ್ದಾರೆ ಎನ್ನುವುದು